ಕಾವೇರಿ ನೀರಿನ ವಿವಾದದ ಬಂದ್‌ನ ಸಮಯದಲ್ಲಿ ಹಾನಿಗೊಳಗಾದ ನಷ್ಟದ ಅಂದಾಜು

1503. ಶ್ರೀ ಎಂ. ಪಿ. ಮೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಮತ್ತು ಅಭಿಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾವೇರಿ ನೀರಿನ ವಿವಾದ ಸಮಯದ/ಬಂದ್ ಸಮಯದಲ್ಲಿ ಹಾನಿಗೊಳಗಾದ ವಸ್ತುಗಳ. ಕಟ್ಟಡಗಳ. ವಾಹನಗಳ ಮತ್ತು ಇತರೆ ನಾಶವಾದ ವಸ್ತುಗಳ ಅಂದಾಜು ಹಣವೆಷ್ಟು:

ಆ) ರಾಜ್ಯದಿಂದ ತಮಿಳುನಾಡಿಗೆ ಹೋದ ತಮಿಳರ ಸಂಖ್ಯೆ ಎಷ್ಟು:

ಇ) ವಾಪಸು ಬಂದವರ ಸಂಖ್ಯೆ ಎಷ್ಟು:

ಈ) ರಾಜ್ಯ ಸರ್ಕಾರದವರು ತಮಿಳರ ಸಂರಕ್ಷಣೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):

ಅ) ರೂ. 46.98.53.017-00

ಆ) ಸುಮಾರು 69.085 ಜನರು.

ಇ) ಬಹುತೇಕ ಎಲ್ಲರೂ ವಾಪಸ್ಸು ಬಂದಿರುತ್ತಾರೆ.

ಈ) ತಮಿಳರು ವಾಸಿಸುವ ಸ್ಥಳಗಳಲ್ಲಿ ಅವರ ಮೇಲಿನ ದುಷ್ಕೃತ್ಯಗಳನ್ನು ತಡೆಯಲು ಬಿಗಿ ಬಂದೋಬಸ್ತು ಏರ್ಪಡಿಸಲಾಗಿದೆ. ತಮಿಳರ ಪ್ರಾಣ. ಆಸ್ತಿ-ಪಾಸ್ತಿ ಹಾನಿಯಾಗದಂತೆ ಸಂಪೂರ್ಣ ಸಂರಕ್ಷಣಾ ಕ್ರಮವನ್ನು ತೆಗೆದುಕೊಳ್ಳ ಲಾಗಿದೆ. ರಾಜ್ಯದಿಂದ ವಲಸೆ ಹೋದ ಹಾಗೂ ರಾಜ್ಯಕ್ಕೆ ವಲಸೆ ಬಂದವರಿಗೆ ಗಡಿ ಜಿಲ್ಲೆಗಳಲ್ಲಿ ಪುನರ್ವಸತಿ. ಊಟ ಹಾಗೂ ಬಟ್ಟೆಬರೆ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿ ನಡೆದಿರುವ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

1817. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ 1989 ರಿಂದ ಇಲ್ಲಿಯವರೆಗೆ ಎಷ್ಟು ವರದಕ್ಷಿಣೆ ಪ್ರಕರಣಗಳು ನಡೆದಿವೆ?

2) ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಎಷ್ಟು ಜನ ಸಾವಿಗೀಡಾಗಿದ್ದಾರೆ?

3) ಸರ್ಕಾರ ವರದಕ್ಷಿಣೆ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿದೆಯೇ? ಯಾವುವು (ವಿವರ ನೀಡುವುದು)?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

1)

	1989	1990	1991	1992 (31-1-92 ರವರೆಗೆ)
ವರದಕ್ಷಿಣೆ ಸಾವು ಪ್ರಕರಣಗಳು	190	193	221	14
ವರದಕ್ಷಿಣೆ ಕಿರುಕುಳ ಪ್ರಕರಣಗಳು	752	887	892	59

2)

ವರ್ಷ	ವರದಕ್ಷಿಣೆ ಪ್ರಕರಣಗಳಲ್ಲಿ ಮೃತರಾದವರು
1989	190
1990	193
1991	221
1992 (31-1-92ರವರೆಗೆ)	14

3) 1) ವರದಕ್ಷಿಣೆಯ ಬಾಧ್ಯೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ನಿವಾರಿಸಲು ವರದಕ್ಷಿಣೆ ನಿರೋಧ ದಳವೆಂಬ ಒಂದು ವಿಶೇಷ ದಳವನ್ನು ಅಪರಾಧ ತನಿಖಾ ವಿಭಾಗದಲ್ಲಿ 1989 ರಲ್ಲಿ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್. ಮಹಿಳಾ ಪೊಲೀಸ್ ಅಧಿಕಾರಿಗಳು ಮತ್ತು ಇತರೆ ಬೆಂಬಲಿತ ಸಿಬ್ಬಂದಿಯೊಂದಿಗೆ ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಸರ್ಕಾರವು ವರದಕ್ಷಿಣೆ ನಿರೋಧ ದಳಕ್ಕೆ ಹೆಚ್ಚುವರಿಯಾಗಿ 11 ಜನ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಹುದ್ದೆಯ ಮಂಜೂರಾತಿಯನ್ನು ನೀಡಿರುತ್ತದೆ.

2) ವರದಕ್ಷಿಣೆ ನಿಷೇಧ ಕಾಯ್ದೆ 1984ನ್ನು 1985 ಮತ್ತು 1986ರಲ್ಲಿ ತಿದ್ದುಪಡಿ ಮಾಡಿ. ಇಂಥಹ ಹಾವಳಿಯನ್ನು ತಡೆಗಟ್ಟಲು ಹೆಚ್ಚಿನ ಶಿಕ್ಷೆ ನೀಡಬಹುದಾಗಿದೆ. ಭಾರತೀಯ ದಂಡ ಸಂಹಿತೆಯಲ್ಲಿ ಕಲಂ 304(ಬಿ) ಎಂಬ ಕಲಂ ಅನ್ನು ವರದಕ್ಷಿಣೆ ಅಪರಾಧ ತಡೆಗಟ್ಟಲು ಅಳವಡಿಸಲಾಗಿದೆ.

3) ಎಲ್ಲಾ ವರದಕ್ಷಿಣೆ ಪ್ರಕರಣಗಳಲ್ಲಿ. ಡೆಪ್ಯೂಟಿ ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಅದಕ್ಕೆ ಮೇಲ್ಪಟ್ಟ ಅಧಿಕಾರಿಯವರು ತನಿಖೆಯನ್ನು ಕೈಗೊಳ್ಳುತ್ತಾರೆ. ಮುಖ್ಯವಾದ ಪ್ರಕರಣಗಳನ್ನು ಅಪರಾಧ ತನಿಖಾ ವಿಭಾಗವು ತೆಗೆದುಕೊಳ್ಳುವುದು.

ಅಬಕಾರಿ ಇಲಾಖೆಯಲ್ಲಿ ಉಪ ಆಯುಕ್ತರ ಹುದ್ದೆಗಳ ಸೃಷ್ಟಿ.

1816. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಹೊಸದಾಗಿ ಸೃಷ್ಟಿಸಿರುವ ಉಪ ಆಯುಕ್ತರ ಹುದ್ದೆಗಳೆಷ್ಟು?